ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, 1997ರ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ)

ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಪೂತ್ತೂರು ಮತ್ತು ಸೂಳ್ಯಾ ಘಟನೆಗಳ ಬಗ್ಗೆ ಸರ್ಕಾರದಿಂದ ಹೇಳಿಕೆಯನ್ನು ಕೊಡಿಸುತ್ತೇನೆ ಎಂದು ಹೇಳಿದ್ದೀರಿ. ಯಾವಾಗ ಕೊಡಿಸುತ್ತೀರಿ?

ಅಧ್ಯಕ್ಷರು : ಪ್ರಶ್ನೋತ್ತರ ಅವಧಿ ಮುಗಿದ ಮೇಲೆ ಮಾಡಿಸುತ್ತೇನೆ. ಎಂ.ಪಿ. ಪ್ರಕಾಶ್‌ರವರೇ, ಪೂತ್ತೂರು ಮತ್ತು ಸೂಳ್ಯಾ ಘಟನೆಗಳ ಬಗ್ಗೆ ಸರ್ಕಾರದಿಂದ ಹೇಳಿಕೆ ಕೊಡಬೇಕಾಗಿದೆ. ಆದುದರಿಂದ ಗೃಹಮಂತ್ರಿಯಾದ ರೋಷನ್ ಬೇಗ್‌ರವರನ್ನು ಸದನಕ್ಕೆ ಕರೆಸಿ.

ಶ್ರೀ ಎಂ.ಪಿ. ಪ್ರಕಾಶ್ : ಆಗಬಹುದು.

ಶ್ರೀ ವಾಟಾಳ್ ನಾಗರಾಜ್ : ಅದೇ ರೀತಿ ವೀರಪ್ಪನ್ ಬಗ್ಗೆ ಕೂಡ ಹೇಳಿಕೆ ಕೊಡಿಸಬೇಕು.

ಅಧ್ಯಕ್ಷರು : ಪ್ರಶ್ನೋತ್ತರ ಮೊದಲು ಮುಗಿಯಲಿ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು :

ತುಮಕೂರಿನಲ್ಲಿ ಖಾಸಗಿ ಪ್ರಾಥಮಿಕ ಶಾಲೆಗಳು

407 - ಶ್ರೀ ಬಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಖಾಸಗಿ ಪ್ರಾಥಮಿಕ ಶಾಲೆ ಶಿಕ್ಷಕರುಗಳ ಅನುಮೋದನೆಗೆ 1996-97ನೇ ಸಾಲಿನಲ್ಲಿ ಬಂದಿರುವ ಪ್ರಸ್ತಾವನೆಗಳು ಎಷ್ಟು?

ಆ) ಯಾವ ಯಾವ ಶಾಲೆಗಳಿಂದ ಬಂದಿರುತ್ತದೆ, ತಾಲ್ಲೂಕುವಾರು ಮಾಹಿತಿ ಒದಗಿಸುವುದು?

ಇ) ಅವುಗಳಲ್ಲಿ ಅನುಮೋಧಿಸಿರುವ ಪ್ರಕರಣಗಳು ಎಷ್ಟು? ಯಾವ ಯಾವ ಶಾಲೆಗೆ ಸಂಬಂಧಿಸಿರುತ್ತದೆ. ತಾಲ್ಲೂಕುವಾರು ಹಾಗೂ ಶಾಲಾವಾರು ಮಾಹಿತಿ ಒದಗಿಸುವುದು?

ಈ) ಅನುಮೋದನೆ ಮಾಡದೇ ಇರುವ ಶಾಲೆಗಳ ಸಂಖ್ಯೆಗಳೆಷ್ಟು? ತಾಲ್ಲೂಕುವಾರು ಹಾಗೂ ಶಾಲಾವಾರು ಮಾಹಿತಿ ಒದಗಿಸುವುದು?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 05

ಆ) 1. ಕನ್ನಡ ಮಾತಾ ಹಿರಿಯ ಪ್ರಾಥಮಿಕ ಶಾಲೆ, ಅಮ್ಮಸಂದ್ರ, ತುರುವೇಕೆರೆ ತಾ:

2. ಮರಳೂರು ದಿಣ್ಣೆ ಹಿರಿಯ ಪ್ರಾಥಮಿಕ ಶಾಲೆ, ತುಮಕೂರು ತಾಲ್ಲೂಕು

3. ನಾಟ್ಯ ಸರಸ್ವತಿ, ಶಿರಾಗೇಟ್ ತುಮಕೂರು ತಾಲ್ಲೂಕು

4. ಸೇಂಟ ಮೇರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ತುಮಕೂರು ತಾ:

5. ಅಮೃತೂರು ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಅಮೃತೂರು, ಕುಣಿಗಲ್ ತಾ:

ಇ) 1. ಸೇಂಟ್ ಮೇರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ತುಮಕೂರು

2. ಅಮೃತೂರು ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಅಮೃತೂರು, ಕುಣಿಗಲ್ ತಾಲ್ಲೂಕು

ಈ) 1. ಕನ್ನಡ ಮಾತಾ ಹಿರಿಯ ಪ್ರಾಥಮಿಕ ಶಾಲೆ, ಅಮ್ಮಸಂದ್ರ, ತುರುವೇಕೆರೆ ತಾ:

2. ಮರಳೂರು ದಿಣ್ಣೆ ಹಿರಿಯ ಪ್ರಾಥಮಿಕ ಶಾಲೆ, ತುಮಕೂರು ತಾಲ್ಲೂಕು

3. ನಾಟ್ಯ ಸರಸ್ವತಿ, ಶಿರಾಗೇಟ್, ತುಮಕೂರು

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೇ, ಅವರು ಉತ್ತರ ಕೊಟ್ಟಿರುವುದರಲ್ಲಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಅಮೃತೂರು, ಕುಣಿಗಲ್ ತಾಲ್ಲೂಕು, ಇಲ್ಲಿಗೆ 4 ಜನ ಉಪಾಧ್ಯಾಯರನ್ನು ನೇಮಕ ಮಾಡಿಕೊಂಡಿದ್ದಾರೆ. ಇದರಲ್ಲಿ ವಿಚಿತ್ರವೇನೆಂದರೆ ದಿನಾಂಕ 10-3-97 ರಲ್ಲಿ ಸೂಪರಿಂಟೆಂಡೆಂಟ್ ಈ ವಿಷಯದ ಬಗ್ಗೆ ಡಿ.ಡಿ.ಪಿ.ಐ. ರವರಿಗೆ ಪತ್ರ ಬರೆದು ಅನುಮೋದನೆಗಾಗಿ ಕಳುಹಿಸುತ್ತಾರೆ ಸೂಪರಿಂಟೆಂಡೆಂಟ್ ಆದಮೇಲೆ ಮ್ಯಾನೇಜರ್‌ರವರು 10ನೇ ತಾರೀಖು ಸಹಿಯನ್ನು ಹಾಕುತ್ತಾರೆ. ಡಿ.ಡಿ.ಪಿ.ಐ. ರವರು 13ನೇ ತಾರೀಖು ಸಹಿಯನ್ನು ಹಾಕುತ್ತಾರೆ. ಆದರ ಆರ್ಡರ್ 01-01-97ಕ್ಕೆ ಅಂದರೆ ಎರಡು ತಿಂಗಳ ಹಿಂದಕ್ಕೆ ಹಾಕಿ ಆದೇಶವನ್ನು ಮಾಡುತ್ತಾರೆ. ಈ ಫೈಲ್‌ನಲ್ಲಿ ಯಾವುದೇ ರೀತಿಯ ಆದೇಶವಿಲ್ಲ.

ಮೊದಲನೆಯ ಫೈಲ್ ಅದರ ನಂಬರ್ ಸಿಸಿಐ 28:96-97. ಇದರಲ್ಲಿ ಇರುವ ಟಿಪ್ಪಣಿ 13ನೇ ತಾರೀಖಿನದ್ದು. 10-3-97ರಲ್ಲಿ ಸೂಪರಿಂಟೆಂಡೆಂಟ್ ಅವರು ಡಿಡಿಸಿಐ ಯವರಿಗೆ ಕಳುಹಿಸುತ್ತಾರೆ. ಅವರು ಜೋಟಾ ರುಜು 13ನೇ ತಾರೀಖಿಗೆ ಹಾಕುತ್ತಾರೆ. ಆ ಫೈಲ್ ನಂಬರ್ 138:96-97 ಇದನ್ನು ನಾನು ಶ್ರೀ ಗೋವಿಂದೇಗೌಡರಿಗೆ ತಮ್ಮ ಮೂಲಕ ಕಳುಹಿಸುತ್ತಿದ್ದೇನೆ. ದಯಮಾಡಿ ಗೋವಿಂದೇಗೌಡರು ಅದಕ್ಕೆ ಉತ್ತರ ಕೊಡಲಿ. ಇದರ ಬಗ್ಗೆ ಶಂಕರಪ್ಪ ಎನ್ನುವ ವ್ಯಕ್ತಿಯು ಅರ್ಜಿಯನ್ನು ಕೊಟ್ಟಿದ್ದಾನೆ ಇಲ್ಲಿ ಅವ್ಯವಹಾರ ನಡೆದಿದೆ ಯಾರು ಸಂದರ್ಶನಕ್ಕೆ ಹೋಗಿಲ್ಲ ಅವರನ್ನು ಇನ್‌ಕ್ಲೂಡ್ ಮಾಡಿದ್ದಾರೆ. ಶಂಕರಪ್ಪ ಎನ್ನುವವರಿಗೆ ತೊಂದರೆಯಾಗಿದೆ, ಅರ್ಜಿ ಕೊಟ್ಟಂಥವರಿಗೆಲ್ಲ ತೊಂದರೆಯಾಗಿದೆ. ಎನ್ನತಕ್ಕಂತಹ ವಿಚಾರವನ್ನು ಸರ್ಕಾರಕ್ಕೆ, ಕಾರ್ಯದರ್ಶಿಯವರಿಗೆ, ಕಾರ್ಯದರ್ಶಿ - (2)ಆಯುಕ್ತರಿಗೆ ಮತ್ತು ಉಪ ಕಾರ್ಯದರ್ಶಿಗಳಿಗೆ ಅರ್ಜಿಯನ್ನು ಬರೆದು ಕೊಟ್ಟಿದ್ದಾರೆ.

ಅಧ್ಯಕ್ಷರು : ನಿಮ್ಮ ಪ್ರಶ್ನೆ ಇರುವುದು ಖಾಸಗಿ ಪ್ರಾಥಮಿಕ ಶಾಲೆ ಶಿಕ್ಷಕರ ಅನುಮೋದನೆ. 1996-97 ಸಾಲಿನಲ್ಲಿ ಬಂದ ಪ್ರಸ್ತಾವನೆಗಳು ಎಷ್ಟು ಎಂದು. ಅದಕ್ಕೆ ಅವರು ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಅನುಮೋದನೆ ಮಾಡಬೇಕಾದರೆ ಕಾನೂನುಬದ್ಧವಾಗಿರಬೇಕಲ್ಲ. ಅದರ ಹಿಂದೆ ತಾನೆ ಇದು ಬರುವುದು. ಅದಕ್ಕೆ ನಾನು ಕೇಳುತ್ತಿದ್ದೇನೆ ಇದರಲ್ಲಿ ಭ್ರಷ್ಟಾಚಾರ ನಡೆದಿದೆ. ಇದರ ಬಗ್ಗೆ ಶಂಕರಪ್ಪ ಎನ್ನತಕ್ಕ ವ್ಯಕ್ತಿಯು ಅರ್ಜಿಯನ್ನು ಎಲ್ಲ ಅಧಿಕಾರಿಗಳಿಗೆ ಕೊಟ್ಟಿದ್ದಾರೆ, ನನಗೂ ಸಹ ಕೊಟ್ಟಿದ್ದಾರೆ. ಅದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ.

ಅಧ್ಯಕ್ಷರು : ಶಂಕರಪ್ಪ ಎನ್ನುವವರು ಈಗ ಖಾಸಗಿ ಶಾಲೆಯಲ್ಲಿ ಕೆಲಸಮಾಡುತ್ತಾ ಇದ್ದಾರೆಯೇ?

ಶ್ರೀ ಜಿ.ಎಸ್. ಶಿವನಂಜಪ್ಪ : ಅವರನ್ನು ಸೆಲೆಕ್ಷನ್ ಮಾಡಿಕೊಂಡಿಲ್ಲ, ಅದಕ್ಕಾಗಿ ಅರ್ಜಿಯನ್ನು ಕೊಟ್ಟಿದ್ದಾರೆ. ನಾನು ಅರ್ಜಿಯನ್ನು ಹಾಕಿದರೂ ಸಹ ನನಗೆ ಸಂದರ್ಶನ ಬಂದಿಲ್ಲ. ಅಲ್ಲಿ ಯಾರನ್ನು ಅಪಾಯಿಂಟಮೆಂಟ್ ಮಾಡಿಕೊಂಡಿದ್ದಾರೆ ಎಂದರೆ, ಗುರುತರವಾದ ಆಪಾದನೆ ಡಿಡಿಪಿಐ ಅವರ ಸಂಬಂಧಿಗಳನ್ನು ತೆಗೆದುಕೊಂಡಿದ್ದಾರೆ ಎಂದು.

MR. SPEAKER : You are a very senior Member. ಖಾಸಗಿ ಶಾಲೆಗಳಲ್ಲಿ ಅವರು ಅವರ ವೇಕೆನ್ಸಿಗಳನ್ನು ನೋಟಿಫೈ ಮಾಡುತ್ತಾರೆ. ರೋಸ್ಟರ್ ಸಿಸ್ಟಂನ್ನು ಸರ್ಕಾರ ಸಜೆಸ್ಟ್ ಮಾಡಿ ಈ ಪ್ರಕಾರ ಮಾಡಬೇಕೆಂದು ಹೇಳುತ್ತಾರೆ. ಆದ್ದಿರಿಂದ, ಅದರ ಪ್ರಕಾರ ಅಪ್ಲಿಕೇಶನ್‌ಗಳನ್ನು ರೋಸ್ಟರ್ ಪ್ರಕಾರ ಭರ್ತಿ ಮಾಡಿದ್ದಾರಾ ಅಥವಾ ಇಲ್ಲವೇ ಎಂದು ನೋಡುತ್ತಾರೆ. ಉಲಿದಿದ್ದು ಇವರಿಗೆ ಏನು ಸಂಬಂಧ ಬರುವುದಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ : ಹಾಗಾದರೆ ಏನಾದರೂ ಅನ್ಯಾಯ ಮಾಡಬಹುದಾ? ಪತ್ರಿಕೆಯಲ್ಲಿ ಪ್ರಕಟಣೆ ಮಾಡಿದ್ದಾರೆ. ಇಂಥ ದಿವಸ ಸಂದರ್ಶನ ಇದೆ ಎಂದು. ಎಲ್ಲರನ್ನೂ ಕರೆದಿದ್ದಾರೆ, ಶಂಕರಪ್ಪನವರನ್ನು ಮಾತ್ರ ಕರೆದಿಲ್ಲ ಇದು ಏಕೆ? ಇದರಲ್ಲಿ ದೊಡ್ಡದಾಗಿ ಇರತಕ್ಕ ವಿಚಾರ ಇಷ್ಟೇ 10-3-97ರಲ್ಲಿ ಟಿಪ್ಪಣಿ ಹೋಗುತ್ತದೆ.

MR. SPEAKER : Is that Shankarappa an applicant? That is No.1. ನಂಬರ್ ೧ರಡು ಅವರು ಯಾವ ವರ್ಗಕ್ಕೆ ಸೇರುತ್ತಾರೆ ಆ ವರ್ಗಕ್ಕೆ ಅದು ಇದೆಯೇ ? Let the government nswer.

ಶ್ರೀ ಹೆಚ್.ಸಿ. ಗೋವಿಂದೇಗೌಡ : ಅನುದಾನ ಶಾಲೆಗಳಲ್ಲಿ ನೇಮಕಾತಿ ಆಗಬೇಕಾದರೆ, ೋಸ್ಟರ್ ವಯಲೆಟ್ ಮಾಡಿದ್ದರೆ ಯಾರಿಗೂ ನೇಮಕಾತಿ ಮಾಡಿಕೊಳ್ಳಲು ಅವಕಾಶವಿಲ್ಲ. ಪ್ರೈವೇಟ್ ್ಕೂಲ್‌ಗಳಲ್ಲಿ ಅವರು ತಮಗೆ ಬೇಕು ಎಂದೇ ನೇಮಕಾತಿ ಮಾಡಿದಾಗ ವಯಲೆಟ್ ಮಾಡುತ್ತಾರೆ. ಂಥ ಸಂದರ್ಭದಲ್ಲಿ ಸರ್ಕಾರ ಅದಕ್ಕೆ ಅನುಮತಿ ಕೊಡುವುದಿಲ್ಲ. ಆ ರೀತಿ ಆಗಿದ್ದರೆ ಅದನ್ನು ರಿಪಡಿಸುತ್ತೇನೆ.

ಅಧ್ಯಕ್ಷರು : ಶಂಕರಪ್ಪ ಎನ್ನುವ ವ್ಯಕ್ತಿ ಯಾವ ಸಂಸ್ಥೆಗೆ ಅರ್ಜಿ ಹಾಕಿಕೊಂಡಿದ್ದರು? ಯಾವ ುದ್ದೆಗೆ ಹಾಕಿಕೊಂಡಿದ್ದರು? ಮತ್ತೆ ಇವರು ಯಾವ ವರ್ಗಕ್ಕೆ ಸೇರಿದ್ದಾರೆ ಆ ವರ್ಗಕ್ಕೆ ಆ ಹುದ್ದೆ ೀಸಲಾಗಿದೆಯೇ? ಹಾಗೆ ಅರ್ಹತೆ ಇದ್ದು ಇವರನ್ನು ಏಕೆ ಪರಿಗಣನೆಗೆ ತೆಗೆದುಕೊಳ್ಳಲಿಲ್ಲ? ಡಿಡಿಪಿಐ ವರು ತಮ್ಮ ಆಪ್ತರನ್ನು ತೆಗೆದುಕೊಳ್ಳಲು ಇವರ ಅರ್ಜಿಯನ್ನು ಪರಿಗಣಿಸಲಿಲ್ಲವೆ? Please look ito that and kindly take action. This is Question Hour. We cannot dabate.

ಶ್ರೀ ಜಿ.ಎಸ್. ಶಿವನಂಜಪ್ಪ : ಇದು 10-3-97ರಲ್ಲಿ ಕೇಸ್ ನಂಬರ್ 28: 96-97 ಟಿಪ್ಪಣಿ ೋಗುತ್ತದೆ. ಡಿಡಿಪಿಐ ಅವರಿಗೆ ಮ್ಯಾನೇಜರ್ ಮೂಲಕ ಸೂಪರಿಂಟೆಂಡೆಂಟ್ ಮೂಲಕ. ಡಿಡಿಪಿಐ ವರು 13-3-96 ರಂದು ಸಹಿ ಹಾಕುತ್ತಾರೆ. ಆದರೆ ಆದೇಶ ಹೊರಡಿಸಿದ್ದು 1-1-97 ಎರಡು ಂಗಳ ಹಿಂದಕ್ಕೆ. ಸಂದರ್ಶನಕ್ಕಿಂತ ಹಿಂದಕ್ಕೆ 1-3-97ಕ್ಕಿಂತ ಹಿಂದಕ್ಕೆ ಹಾಕಿದ್ದಾರೆ ಅಂದರೆ 1-1-97ಕ್ಕೆ ಃ ಆರ್ಡರ್ ಕಾಪಿಯನ್ನು ಈ ಟಿಪ್ಪಣಿ ಕಾಪಿಗಳನ್ನು ನಮ್ಮ ಗೋವಿಂದೇಗೌಡರಿಗೆ ತಮ್ಮ ಮೂಲಕ ುಹಿಸುತ್ತೇನೆ. ಇದರಲ್ಲಿ ಭ್ರಷ್ಟಾಚಾರ ಎದ್ದು ಕಾಣುತ್ತಿದೆ. ಇದಕ್ಕೆ ಯಾವುದೇ ಚರ್ಚೆ ಬೇಕಾಗಿಲ್ಲ, ಾವುದೇ ರೀತಿಯ ಎಕ್ಸ್‌ಪ್ಲೆನೇಶನ್ ಬೇಕಾಗಿಲ್ಲ. 1-3-97ಕ್ಕೆ ಬದಲಾಗಿ 1-1-97ಕ್ಕೆ ಆರ್ಡರ್ ಗತ್ತಾ ಇದೆ, ಆರ್ಡರ್ ಆಗಿದೆ. ಫೈಲ್‌ನಲ್ಲಿ ಯಾವುದೇ ಆರ್ಡರ್ ಇಲ್ಲ. ಈ ರೀತಿಯ ಆರ್ಡರ್ ಒಟ್ಟರೆ ಅದು ಭ್ರಷ್ಟಾಚಾರ ಆಗುವುದಿಲ್ಲವೆ? ಇದನ್ನು ತಾವು ಗಮನಿಸಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡರು : ರೋಸ್ಟರ್ ಪ್ರಕಾರ ನೇಮಕಾತಿ ಆಗದಿದ್ದರೆ ಅದನ್ನು ಾವುದೇ ರೀತಿಯಲ್ಲಿ ಒಪ್ಪಿಕೊಳ್ಳಲು ಆಗುವುದಿಲ್ಲ. ಇಲ್ಲಿ ಐದು ಜನ ನೇಮಕವಾಗಿದ್ದಾರೆ ಇನ್ನು ಳಿದವರು ಆಗಿಲ್ಲ. ಅದು ರೋಸ್ಟರ್ ಪ್ರಕಾರ ಅನುಸರಿಸದೆ ಇರುವುದರಿಂದ ಅಥವಾ ಇನ್ ಮ್ ಅಪ್ಪ್ರೂ ಮಾಡದೇ ಇರುವುದರಿಂದ ಅಂದರೆ 1992 ರಿಂದ ಈಚೆಗೆ ಅವರು ಅಪ್ಪ್ರೂ ಮಾಡಿದರೆ ವರಿಗೆ ಅಪ್ರೂವಲ್ ಕೊಡಲು ಆಗುವುದಿಲ್ಲ. 1992 ಕ್ಕಿಂತ ಹಿಂದೆ ಆದರೆ ರೋಸ್ಟರ್ ವಯಲೆಟ್ ಾಗಿದೆ. ಇನ್ನು ಮುಂದೆ ಯಾವುದೇ ರೀತಿಯಿಂದ ವಯಲೆಟ್ ಆಗಲು ಅವಕಾಶ ಆಗುವುದಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ : ನಿಮ್ಮ ಅಪಾಯಿಂಟ್‌ಮೆಂಟ್ ಬಗ್ಗೆ ಪ್ರಶ್ನೆ ಕೇಳಲಿಲ್ಲ. 1.3.97 ಡಿಡಿಪಿಐನವರು ಆ ನೋಟ್‌ಗೆ ಸಿಗ್ನೇಚರ್ ಹಾಕುತ್ತಾರೆ, 1-1-97ಕ್ಕೆ ಆರ್ಡರ್ ಆಗುತ್ತಾ ಇದೆ, 2

ತಿಂಗಳ ಹಿಂದಕ್ಕೆ ಹೀಗೆ ಅಪಾಯಿಂಟ್‌ಮೆಂಟ್ ಆರ್ಡರ್ ಕೊಡುತ್ತಾರೆ, ಆಮೇಲೆ ಇದರ ಫೈಲ್ ಬೇರೆ. 10-3-97ಕ್ಕೆ ಟಿಪ್ಪಣಿ, 11-3-97ಕ್ಕೆ ಡಿಡಿಪಿಐ ಸಿಗ್ನೇಚರ್ ಹಾಕುತ್ತಾರೆ, ಆದರೆ, ಆರ್ಡರ್ ಹೊರಟಿರುವುದು 1-1-97 ಹೇಗೆ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಪೋಸ್ಟನ್ನು ಸ್ಯಾಂಕ್ಷನ್ ಮಾಡಿ ನೋಟಿಫೈ ಮಾಡಬೇಕಲ್ಲ, ಟಿಪ್ಪಣಿ ಇರತಕ್ಕಂತದ್ದು ಮಾರ್ಚ್, ಜನವರಿಯಲ್ಲಿ ಹಿಂದಿನ ದಿನಾಂಕವನ್ನು ಹಾಕಿ ಪಬ್ಲಿಷ್ ಮಾಡಿ ಅಪಾಯಿಂಟ್‌ಮೆಂಟ್ ಕೊಟ್ಟುಬಿಟ್ಟಿದ್ದಾರೆ. ಪೋಸ್ಟ್ ಅಪ್ರೂವಲ್ ಆಗುವುದು ಮಾರ್ಚ್‌ನಲ್ಲಿ, ನೋಟಿಫಿಕೇಶನ್ ಇಶ್ಯೂ ಮಾಡಿಕೊಂಡು, ಹೀಗೆಲ್ಲ ಮಾಡಿಕೊಂಡು ಅಪಾಯಿಂಟ್‌ಮೆಂಟ್ ಕೊಟ್ಟಿದ್ದು ಜನವರಿಯಲ್ಲಿ.

ಅಧ್ಯಕ್ಷರು : ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದರೆ, he will get hold of all the records, look into it and take action. ಮುಂದಿನ ಪ್ರಶ್ನೆ ರಾಮಸ್ವಾಮಿಯವರದು, ಆದರ ಅದು ಪ್ಲಾನಿಂಗ್ ಇಲಾಖೆಗೆ ವರ್ಗಾವಣೆಯಾಗಿದೆ. ಈಗ ಕೆ.ಎಸ್. ಪುಟ್ಟಣ್ಣಯ್ಯ.

ರಾಜ್ಯದಲ್ಲಿ ಅರಣ್ಯಾಭಿವೃದ್ಧಿಗಾಗಿ ಕಾರ್ಯಕ್ರಮಗಳು

409 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಸಾಲಿನಲ್ಲಿ ರಾಜ್ಯದಲ್ಲಿ ಅರಣ್ಯದ ಅಭಿವೃದ್ಧಿ ಬಗ್ಗೆ ಯಾವ ಕಾರ್ಯಕ್ರಮ ರೂಪಿಸಲಾಗಿದೆ

ಆ) ಅರಣ್ಯದ ಅಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ಪ್ರತಿ ವರ್ಷ ಬುರವ ಹಣ ಎಷ್ಟು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

ಅ) 1997-98 ನೇ ಸಾಲಿನಲ್ಲಿ ಕೈಗೊಂಡ ಅರಣ್ಯಾಭಿವೃದ್ಧಿ ಕಾರ್ಯಕ್ರಮಗಳ ವಿವರಗಳನ ಅನುಬಂಧ - 1 ರಲ್ಲಿ ತೋರಿಸಲಾಗಿದೆ.

ಆ) ಅನುದಾನದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ವರ್ಷಗಳು		(ರೂ. ಲಕ್ಷಗಳಲ್ಲಿ)
1992-93	-	515.000
1993-94	-	396.200
1994-95	-	348.590
1995-96	-	345.870
1996-97	-	445.615